VIDYAVARDHAKA LAW COLLEGE
LIBRARY
MYSURU

0601

**Sixth Semester of Three Year LL.B. Degree Examination, June/July 2012**
**LAW OF EVIDENCE**

Duration : 3 Hours Max. Marks : 100

**Instructions :** 1. Answer all **five** Questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the right indicate marks.
4. Answers should be written **either** in English or Kannada **completely**.

## UNIT – I

Q. No. 1. (a) What is evidence ? State different kinds of evidence. Marks : 15

ಸಾಕ್ಷ್ಯ ಎಂದರೇನು ? ವಿವಿಧ ರೀತಿಯ ಸಾಕ್ಷ್ಯಗಳನ್ನು ತಿಳಿಸಿರಿ.

OR/ಅಥವಾ

Define admission and point out the differences between admission and confession.

ಒಪ್ಪಿಗೆಯನ್ನು ವ್ಯಾಖ್ಯಾನಿಸಿ ಮತ್ತು ಒಪ್ಪಿಗೆ ಮತ್ತು ತಪ್ಪೊಪ್ಪಿಗೆಗಳ ನಡುವಿನ ವ್ಯತ್ಯಾಸಗಳನ್ನು ಸೂಚಿಸಿರಿ.

(b) 'A' is tried for the murder of 'B' by poisoning. Is the fact, that before the death of 'B', 'A' procured poison similar to that which was administered to 'B' relevant ? Marks : 5

'ಬ' ನನ್ನು ವಿಷ ಹಾಕಿ ಕೊಂದ ಆಪಾದನೆಯ ಮೇಲೆ 'ಅ'ನನ್ನು ವಿಚಾರಣೆಗೆ ಒಳಪಡಿಸಲಾಯಿತು. 'ಬ'ನು ಸಾಯುವುದಕ್ಕೂ ಮೊದಲು ಅವನಿಗೆ ಹಾಕಿದ ವಿಷದಂತಹುದೇ ವಿಷವನ್ನು 'ಅ'ನು ಪಡೆದು ಕೊಂಡಿದ್ದ ಸಂಗತಿಯು ಸುಸಂಬದ್ಧವೇ ?

OR/ಅಥವಾ

The question is whether a horse sold by 'A' to 'B' is sound. 'A' says to 'B' go and ask 'C', 'C' knows all about it. When asked by 'B', 'C' says that the horse is not sound. Is the statement made by 'C' admissable in evidence ?

'ಅ'ನು 'ಬ'ಗೆ ಮಾರಿದ ಕುದುರೆಯು ಸ್ವಸ್ಥವಿದೆಯೇವೆಂಬುವ ಪ್ರಶ್ನೆ? 'ಅ'ನು 'ಬ' ಗೆ 'ಕ'ಗೆ ಹೋಗಿ ಕೇಳು ಅವನಿಗೆ ಎಲ್ಲಾ ಗೊತ್ತಿದೆ. 'ಬ' ನು 'ಕ' ಗೆ ಕೇಳಲಾಗಿ ಆ ಕುದುರೆಯು ಸ್ವಸ್ಥವಾಗಿಲ್ಲ ಎಂದು 'ಕ 'ನು ಹೇಳುವನು. 'ಕ ' ಹೇಳಿಕೆಯು ಸಾಕ್ಷಿಯಾಗಿ ಸ್ವೀಕಾರವಾಗುವುದೆ ?

P.T.O.

## UNIT – II

Q. No. 2. (a) State the provisions of Indian Evidence Act relating to facts which need not be proved. Marks : 15

ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಬರುವ ಸಾಬೀತು ಮಾಡಬೇಕಾಗಿರದ ಸಂಗತಿಗಳಿಗೆ ಸಂಬಂಧಪಟ್ಟ ಉಪಬಂಧಗಳನ್ನು ತಿಳಿಸಿರಿ.

OR/ಅಥವಾ

Explain the circumstance in which judgements of court become relevant.

ನ್ಯಾಯಾಲಯದ ತೀರ್ಪುಗಳು ಸುಸಂಬದ್ಧವಾಗುವ ಸಂದರ್ಭಗಳನ್ನು ವಿವರಿಸಿರಿ.

(b) 'A' is accused of theft. During the police custody he indicated the place where the stolen goods were hidden and the police recovered those goods. Can this information be used against 'A' ? Marks : 5

'ಅ' ನು ಕಳ್ಳತನದ ಆಪಾದನೆಗೊಳಗಾಗಿದ್ದಾನೆ. ಪೋಲಿಸರ ವಶದಲ್ಲಿದ್ದಾಗ ಕಳ್ಳತನದ ವಸ್ತುಗಳನ್ನು ಅಡಗಿಸಿಟ್ಟ ಸ್ಥಳದ ಬಗ್ಗೆ ಅವನು ಹೇಳಲಾಗಿ ಅವರು ಆ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಹೇಳಿಕೆಯನ್ನು 'ಅ' ನ ವಿರುದ್ಧ ಉಪಯೋಗಿಸಬಹುದೇ ?

OR/ಅಥವಾ

The question is whether 'A' was the legitimate son of 'B' ? Is the fact 'A' was always treated as such by the members of the family relevant ?

'ಅ' ನು 'ಬ'ನ ನ್ಯಾಯಬದ್ಧ ಮಗನೇ ? ಎನ್ನುವುದು ನ್ಯಾಯಾಲಯದ ಮುಂದೆ ಇತ್ಯರ್ಥವಾಗಬೇಕಾದ ಪ್ರಶ್ನೆ ಇದ್ದಾಗ ಕುಟುಂಬದ ಸದಸ್ಯರು ಯಾವಾಗಲು 'ಅ' ನನ್ನು ಹಾಗೆ ಪರಿಗಣಿಸುತ್ತಿದ್ದರು, ಎನ್ನುವುದು ಸುಸಂಬದ್ಧವೇ ?

## UNIT – III

Q. No. 3. (a) What do you mean by Secondary Evidence ? State the circumstances in which secondary evidence may be given. Marks : 15

ದ್ವಿತೀಯ ಸಾಕ್ಷ್ಯ ಎಂದರೇನು ? ಯಾವ ಸಂದರ್ಭಗಳಲ್ಲಿ ದ್ವಿತೀಯ ಸಾಕ್ಷ್ಯವನ್ನು ನೀಡಬಹುದು ಎಂಬುದನ್ನು ಹೇಳಿರಿ.

OR/ಅಥವಾ

Define presumptions and explain presumptions as to ancient documents.

ಪೂರ್ವಭಾವನೆಯನ್ನು ವ್ಯಾಖ್ಯಾನಿಸಿ ಮತ್ತು ಪ್ರಾಚೀನ ದಸ್ತಾವೇಜಿಗೆ ಸಂಬಂಧಿಸಿದಂತೆ ಇರುವ ಪೂರ್ವಭಾವನೆಯನ್ನು ವಿವರಿಸಿರಿ.

(b) Write a note on public documents. Marks : 5

ಸಾರ್ವಜನಿಕ ದಸ್ತಾವೇಜುಗಳ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Write a note on Hearsay evidence.

ಕೇಳಿ ತಿಳಿದ ಸಾಕ್ಷಿಗಳ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – IV

Q. No. 4. (a) Explain the provisions of Indian Evidence Act relating to Burden of proof. Marks : 15

ರುಜುವಾತಿನ ಭಾರದ ಬಗ್ಗೆ ಭಾರತ ಸಾಕ್ಷ್ಯ ಅಧಿನಿಯಮ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

Court may presume existence of certain facts. Discuss.

ಕೆಲ ಸಂಗತಿಗಳ ಇರುವಿಕೆ ಬಗ್ಗೆ ನ್ಯಾಯಾಲಯವು ಪೂರ್ವಭಾವನೆ ಮಾಡಬಹುದು. ಚರ್ಚಿಸಿರಿ.

(b) 'A' has declared the value of goods as Rs. 500/- at the time of consignment. On loss of goods, he is claiming the value of goods much more than Rs. 500/-. Can he be allowed to take this stand ? Marks : 5

ತನ್ನ ಸರಕುಗಳನ್ನು ಸಾಗಾಣಿಕೆಗೆ ಹಾಕುವಾಗ 'ಅ' ನು ಅವುಗಳ ಮೌಲ್ಯವು 500 ರೂಪಾಯಿಗಳೆಂದು ಹೇಳಿದ್ದನು. ಕಳೆದು ಹೋದಾಗ, ಅವನು ಅವುಗಳ ಮೌಲ್ಯವು 500 ರೂಪಾಯಿಗಳಿಗಿಂತ ಹೆಚ್ಚೆಂದು ಹೇಳುತ್ತಿರುವನು. 'ಅ' ನಿಗೆ ಅಂತಹ ನಿಲುವನ್ನು ತಳೆಯಲು ಅವಕಾಶವಿದೆಯೇ ?

OR/ಅಥವಾ

Promissory Estoppel.

ಆಶ್ವಾಸನಾ ಪ್ರತಿಬಂಧ.

## UNIT – V

Q. No. 5. (a) Explain the provisions of Indian Evidence Act relating to competency of witnesses. Marks : 15

ಸಾಕ್ಷಿಗಳ ಸಮರ್ಥತೆ ಕುರಿತು ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಇರುವ ಉಪಬಂಧಗಳನ್ನು ವಿವರಿಸಿರಿ.

OR/ಅಥವಾ

What are leading questions ? When they can be asked ?

ಉತ್ತರ ಸೂಚಕ ಪ್ರಶ್ನೆಗಳೆಂದರೇನು ? ಅವುಗಳನ್ನು ಯಾವಾಗ ಕೇಳಬಹುದು ?

(b) 'A' a client says to 'B' an attorney "I have committed murder of 'C' and I wish you to defend me". Can this communication be disclosed by an attorney ? Marks : 5

'ಅ' ನೆಂಬ ಕಕ್ಷಿದಾರನು 'ಬ' ಎಂಬ ನ್ಯಾಯವಾದಿಗೆ "ನಾನು 'ಕ' ನ ಕೊಲೆ ಮಾಡಿದ್ದೇನೆ ಮತ್ತು ನೀವು ನನ್ನನ್ನು ರಕ್ಷಿಸಬೇಕೆಂದು ಬಯಸುತ್ತೇನೆ" ಎಂದು ಹೇಳುತ್ತಾನೆ. ಈ ತಿಳಿಹೇಳಿಕೆಯನ್ನು ನ್ಯಾಯವಾದಿಯು ಪ್ರಕಟಿಸಬಹುದೆ ?

OR/ಅಥವಾ

Impeaching the credit of witness.

ಸಾಕ್ಷಿಯ ವಿಶ್ವಾಸಾರ್ಹತೆಗೆ ಧಕ್ಕೆ ತರುವುದು.

---